ಶ್ರೀ ಹೆಚ್.ಜಿ. ಗೋವಿಂದೇಗೌಡ:- ಡ್ರಾಯಿಂಗ್ ಟೀಚರ್‌ಗಳನ್ನು ಅಪಾಯಿಂಟ್‌ಮೆಂಟ್ ಹಾಗೂ ಕ್ರಾಫ್ಟ್ ಟೀಚರ್ಸ್ ಅನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಬೇರೆ ವಿಧಾನಗಳಿವೆ, ಬೇರೆ ವ್ಯವಸ್ಥೆ ಇದೆ. ಆದರೆ ಜಾಬ್ ಓರಿಯೆಂಟೆಂಡ್ ಕೋರ್ಸ್‌ನಲ್ಲಿ ಇರತಕ್ಕಂಥವರನ್ನು ಅಲ್ಲಿ ಸೇರಿಸುತ್ತಿಲ್ಲ ಅಷ್ಟೇ.

ಶ್ರೀ ಎನ್. ಯೋಗೀಶ್ ಭಟ್:- ಸನ್ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಹೊಸಹೊಸ ಶಾಲೆಗಳು ಮತ್ತು ಕಾಲೇಜುಗಳನ್ನು ಕೊಡುವ ಹಂತದಲ್ಲಿ ಅಂಗವಿಕಲರಿಗೋಸ್ಕರ ಇರುವ, ಮೆಂಟಲಿ ರಿಟಾರ್ಡೆಡ್ ಚಿಲ್ಡ್ರನ್ ಮತ್ತು ಅದೇ ರೀತಿ ಇನ್ನಿತರ ಅಂಗವಿಕಲರ ಕಲ್ಯಾಣಕ್ಕೋಸ್ಕರ ಇರುವಂಥ ಪ್ರೌಢಶಾಲೆಗಳಿಗೆ ಅನುದಾನವನ್ನು ಸರ್ಕಾರದ ಕಡೆಯಿಂದ ಕೊಡಲು ಸಾಧ್ಯವಿದೆಯೇ? ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮಂಗಳಜ್ಯೋತಿ ಎನ್ನುವ ಒಂದು ಸಮಗ್ರ ಶಾಲೆ ದಕ್ಷಿಣ ಕನ್ನಡ ಜಿಲ್ಲೆಯ ವಾಮಂಡೂರಿನಲ್ಲಿ ಅಂಗವಿಕಲರಿಗಾಗಿ ಇರುವಂಥ ಒಂದೇ ಒಂದು ಶಾಲೆ. ಅದು ಏಳು ವರ್ಷಗಳಿಂದ ಸತತವಾಗಿ ಕೆಲಸ ಮಾಡುತ್ತಿದೆ. ಆದರೆ ತಾವು ಯಾವುದೇ ನಾರಮ್ಸ್ ಅನ್ನು ಇಟ್ಟುಕೊಂಡರೂ ಅನುದಾನ ಕೊಡಲು ಸಾಧ್ಯವಾಗುತ್ತಿಲ್ಲ. ಅದನ್ನು ವಿಶೇಷ ಶಾಲೆ ಎಂದು ಪರಿಗಣಿಸಿ ಅನುದಾನ ಕೊಡಲು ಸಾಧ್ಯವಿದೆಯೇ? ರಾಜ್ಯದ ಇನ್ನಿತರ ಶಾಲೆಗಳಿಗೆ ಕೂಡ ಅಂಥಾದ್ದನ್ನು ಗೌರವಿಸಬಹುದೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಈಗಿನ ಕಾನೂನಿನ ಚೌಕಟ್ಟಿನಲ್ಲಿ ಅದಕ್ಕೆ ಅವಕಾಶವಿಲ್ಲ. ಮಾನವೀಯತೆಯ ದೃಷ್ಟಿಯಲ್ಲಿ ಸ್ನೇಹಿತರು ನನ್ನ ಹತ್ತಿರ ಹೇಳಿದ್ದಾರೆ. ಇದು ಬಹುಶಃ ಮಂಗಳೂರಿನಲ್ಲಿ ಒಂದು ಇರಬಹುದು, ಬೆಂಗಳೂರಿನಲ್ಲಿ ಒಂದು ಇರಬಹುದು, ಶಿವಮೊಗ್ಗದಲ್ಲಿ ಒಂದು ಇರಬಹುದು. ಹೀಗೆ ಹಲವಾರು ಕಡೆ ಇರಬಹುದು. ಯಾವುದಾದರೂ ಒಂದನ್ನು ನಾವು ಪರಿಶೀಲನೆ ಮಾಡಿದಾಗ ವಿಶೇಷ ಪ್ರಕರಣ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಕೊಟ್ಟರೆ, ಎಲ್ಲೆಲ್ಲಿ ಇದೆ ಅವರಿಗೆಲ್ಲಾ ಒದಗಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಕೊಟ್ಟಿಲ್ಲ ಮತ್ತು ಅವಕಾಶ ಇಲ್ಲದೇ ಇರುವುದರಿಂದ ಕೊಟ್ಟಿಲ್ಲ ಎನ್ನುವುದನ್ನು ತಾವು ದಯವಿಟ್ಟು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಅದು ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಯೋಚನೆ ಮಾಡೋಣ.

ಅಲ್ಪ ಕಾಲಾವಧಿ ಪ್ರಶ್ನೆ

ವಿಷಯ:- ಪ್ರಸ್ತುತ ಆಯುಕ್ತರ ಹುದ್ದೆ ಕುರಿತು.

1 (3) **ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ):-** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸ್ತುತ ಸಾರಿಗೆ ಆಯುಕ್ತರ ಹುದ್ದೆಯನ್ನು ವಿಭಾಗಾಧಿಕಾರಿ ಹುದ್ದೆಯ ಮಟ್ಟಕ್ಕೆ ಏರಿಸಿರುವ ವಿಷಯ ನಿಜವಲ್ಲವೇ?

ಆ) ಸದರಿ ಹುದ್ದೆಯನ್ನು ಐಪಿಎಸ್ ವೃಂದದಿಂದ ನೇಮಕ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿದೆಯೇ?

ಇ) ಐಪಿಎಸ್ ಅಧಿಕಾರಿಗಳಿಗೆ ಕ್ವಾಸಿ ಜ್ಯುಡಿಸಿಯಲ್‌ನಲ್ಲಿ ಕೆಲಸ ನಿರ್ವಹಿಸುವ ಅನುಭವವಿರುತ್ತದೆಯೇ?

ಈ) ಈ ಹಿಂದೆ ಐಪಿಎಸ್ ಅಧಿಕಾರಿ ಅವರನ್ನು ಸಾರಿಗೆ ಇಲಾಖೆಯ ಆಯುಕ್ತರಾಗಿ ನೇಮಕ ಮಾಡಿದ ಸಂದರ್ಭದಲ್ಲಿ ಬಹಳ ಆಕ್ಷೇಪಣೆಗಳು ಬಂದು ತದ ನಂತರ ಸದರಿ ನೇಮಕಾತಿಯ ಬಗ್ಗೆ ಸರ್ಕಾರದ ಕಾನೂನು ಇಲಾಖೆಯ ಅಭಿಪ್ರಾಯಕ್ಕೆ ಈ ಪ್ರಕರಣವನ್ನು ವಹಿಸಿದ್ದು ನಿಜವಲ್ಲವೇ? ಹಾಗೂ ಈ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯಗಳು ಏನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):-

ಅ) ಹೌದು

ಆ) ಇಲ್ಲ

ಇ) ಸಾಮಾನ್ಯವಾಗಿ ಐಪಿಎಸ್ ಅಧಿಕಾರಿಗಳು ಕ್ವಾಸಿ ಜ್ಯುಡಿಸಿಯಲ್ ಕೆಲಸಗಳನ್ನು ನಿರ್ವಹಿಸುವುದಿಲ್ಲ.

ಈ) ಈ ಮಾಹಿತಿಯು ತಕ್ಷಣಕ್ಕೆ ಲಭ್ಯವಿರುವುದಿಲ್ಲ.

ಶ್ರೀಮತಿ ಪ್ರಮೀಳ ನೇಸರ್ಗಿ: ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಕೊಡುವಾಗ ಪ್ರಸ್ತುತ ಸಾರಿಗೆ ಆಯುಕ್ತರ ಹುದ್ದೆಯನ್ನು ವಿಭಾಗಾಧಿಕಾರಿ ಹುದ್ದೆಯ ಮಟ್ಟಕ್ಕೆ ಏರಿಸಿರುವುದು ನಿಜವಾದುದೇ ಎಂದು ಕೇಳಿದರೆ, 'ಹೌದು' ಎಂದು ಹೇಳಿದ್ದಾರೆ. ಸದರಿ ಹುದ್ದೆಯನ್ನು ಐ.ಪಿ.ಎಸ್. ವೃಂದದಿಂದ ನೇಮಕ ಮಾಡಲು ನಿಯಮಾವಳಿಯಲ್ಲಿ ಅವಕಾಶ ಇದೆಯೇ ಎಂದು ಕೇಳಿದಾಗ, ಇಲ್ಲ ಎಂದು ಹೇಳಿದ್ದಾರೆ. ಆದರೆ ಪ್ರಸ್ತುತ ಐ.ಪಿ.ಎಸ್.ನಲ್ಲಿರತಕ್ಕಂಥ ವ್ಯಕ್ತಿಯೊಬ್ಬರನ್ನು ಆ ಕಾರ್ಯಕ್ಕೆ ನಿಯೋಜನೆಯಲ್ಲಿ ಇಡುವುದಕ್ಕೆ ಕಾರಣ ಏನು? ಯಾರು ಮಾಡಿದರು? ನಿಯಮಗಳಲ್ಲಿ ಅವಕಾಶ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಅಂಥ ಆಫೀಸರ್ ಅನ್ನು ಈಗ ತಾವು ಯಾವ ಕಾರಣದಿಂದ ಅಪಾಯಿಂಟ್ ಮಾಡಿದ್ದೀರಿ? ಅವರಿಗೆ ಕ್ವಾಸಿ ಜ್ಯುಡಿಷಿಯಲ್‌ನಲ್ಲಿ ಕೆಲಸ ನಿರ್ವಹಿಸುವ ಅನುಭವ ಇದೆಯೇ ಎಂದು ಕೇಳಿದಾಗ, ಇಲ್ಲ ಎಂದು ಹೇಳಿದ್ದೀರಿ. ಆದರೂ ಸಹ ಅಂಥವರನ್ನು ಅಪಾಯಿಂಟ್ ಮಾಡಿದ್ದೀರಿ. ಎಸ್.ಟಿ.ಎ.ನಂಥ ಪೋಸ್ಟ್‌ನಲ್ಲಿ ಇಂಥ ಅಧಿಕಾರಿಯನ್ನು ಅಪಾಯಿಂಟ್ ಮಾಡುವುದರಿಂದ ಈಗ ಅವರು ಕೊಟ್ಟಿರತಕ್ಕಂಥ ಜಡ್ಜ್‌ಮೆಂಟ್‌ಗಳ ಗತಿ ಏನು? ಈಗಾಗಲೇ ಮೊದಲು ಇವರನ್ನೇ ಮಾಡಿದ್ದಿರಿ. ಆಗಲೂ ಕೂಡ ತಕರಾರು ಬಂದು ಲಾ ಡಿಪಾರ್ಟ್‌ಮೆಂಟಿಗೆ ರೆಫರ್ ಮಾಡಿ ಅವರು ಆಗುವುದಿಲ್ಲ ಎಂದು ಹೇಳಿದ್ದರು. ಅದಕ್ಕೆ ನಾವು ಉತ್ತರ ಕೇಳಿದರೆ, ಈ ಮಾಹಿತಿ ತಕ್ಷಣಕ್ಕೆ ಲಭ್ಯವಿರುವುದಿಲ್ಲ ಎಂದು ಹೇಳಿದ್ದೀರಿ. ನನಗೆ ಆಶ್ಚರ್ಯವಾಗುತ್ತದೆ, ನಾನು ಎಲ್ಲಾ ರೂಲ್ಸ್‌ಗಳನ್ನೂ ತಂದಿದ್ದೇನೆ. ಐ.ಎ.ಎಸ್. ಎನ್ನುವುದು ಕೇಡರ್ ಪೋಸ್ಟ್. ಇದು ಕೇಡರ್ ಪೋಸ್ಟ್ ಆಗಿರುವುದರಿಂದ ಟ್ರಾನ್ಸ್‌ಪೋರ್ಟ್ ಕಮೀಷನರ್ ಐ.ಎ.ಎಸ್. ಅಧಿಕಾರಿಯೇ ಆಗಬೇಕು ಎಂದು ನಿಮ್ಮ ರೂಲ್ಸ್ ಹೇಳುತ್ತದೆ. ಇದು

ಕೇಡರ್ ಪೋಸ್ಟ್ ಎಂದು ನಿಯೋಜಿತವಾಗಿರುವುದರಿಂದ ರೂಲ್ಸ್‌ನಲ್ಲಿ ಬೇರೆ ಯಾರೇ ಅಧಿಕಾರಿಯನ್ನು ಮಾಡುವುದಕ್ಕೆ ನಿಮಗೆ ಅಧಿಕಾರವಿಲ್ಲ. ಒಂದು ವೇಳೆ ಟೆಂಪೊರರಿಯಾಗಿ ಮಾಡಬೇಕಾದರೆ ಕೂಡ ಸೆಂಟ್ರಲ್ ಗವರ್ನ್‌ಮೆಂಟ್‌ನಿಂದ ಪರ್ಮಿಷನ್ ಬೇಕಾಗುತ್ತದೆ. ಅದೂ ಕೂಡ ಇಲ್ಲಿ ಮಾಡಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತಂದು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಯಾವ ಕಾರಣದಿಂದ ಮಾಡಿದ್ದೀರಿ ಎನ್ನುವುದಕ್ಕೆ ದಯವಿಟ್ಟು ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೇ, ಈ ಉತ್ತರವನ್ನು ಓದಿದಾಗ ನನಗೂ ಅವರಿಗೆ ಆದ ಕನ್‌ಫ್ಯೂಶನ್ನೇ ಆಯಿತು. ಪ್ರಸ್ತುತ ಸಾರಿಗೆ ಆಯುಕ್ತರ ಹುದ್ದೆಯನ್ನು ವಿಭಾಗಾಧಿಕಾರಿ ಹುದ್ದೆಯ ಮಟ್ಟಕ್ಕೆ ಏರಿಸಿರುವುದು ನಿಜವೇ ಎಂದರೆ "ಹೌದು" ಎಂದು ಹೇಳಿದ್ದೇವೆ. ಆಂದರೆ ಟ್ರಾನ್ಸ್‌ಪೋರ್ಟ್ ಕಮೀಷನರ್ ಪೋಸ್ಟ್ ಅನ್ನು ಡಿವಿಷನಲ್ ಕಮೀಷನರ್ ಪೋಸ್ಟಿಗೆ ಏರಿಸಿರುವಿರೇ ಎಂದು ಕೇಳಿದ್ದಾರೆ. ಏಕೆಂದರೆ ಅಲ್ಲಿ ಒಬ್ಬ ಐ.ಪಿ.ಎಸ್. ಆಫೀಸರ್ ಅನ್ನು ನಾವು ಟ್ರಾನ್ಸ್‌ಪೋರ್ಟ್ ಕಮೀಷನರ್ ಆಗಿ ಪೋಸ್ಟ್ ಮಾಡಿದ್ದೇವೆ. ಈಗ ಐ.ಪಿ.ಎಸ್. ಆಫೀಸರ್ ಅನ್ನು ಡಿವಿಷನಲ್ ಕಮೀಷನರ್ ಆಗಿ, ಡೆಪ್ಯುಟಿ ಕಮೀಷನರ್ ಆಗಿ ಪೋಸ್ಟ್ ಮಾಡುವುದಕ್ಕೆ ಕಾನೂನು ಇಲ್ಲ, ಅದು ಸರಿ. ಆ ನಿಯಮಗಳಲ್ಲಿ ಅನುಮತಿ ಇಲ್ಲ. ಆದರೆ ಟ್ರಾನ್ಸ್‌ಪೋರ್ಟ್ ಕಮೀಷನರ್ ಹುದ್ದೆಯನ್ನೇ ಅಪ್‌ಗ್ರೇಡ್ ಮಾಡಿ ಅಲ್ಲಿಗೆ ಒಬ್ಬ ಐ.ಪಿ.ಎಸ್. ಆಫೀಸರ್ ಅನ್ನು ಹಾಕುವುದರಿಂದ ಅವರು ಡಿವಿಷನಲ್ ಕಮೀಷನರ್ ಆಗುವುದಿಲ್ಲ. ಆದಕ್ಕೇ ನಾನು ವಿಚಾರ ಮಾಡಿದೆ. ಹಿಂದೆ ಕೂಡ ಇಲ್ಲಿಗೆ ಕೆಲವು ಐ.ಪಿ.ಎಸ್. ಆಫೀಸರ್‌ಗಳನ್ನು ಹಾಕಿಕೊಂಡಿದ್ದು ಇದೆ. ಈ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಹಾಗೆ ಮಾಡಿದ್ದಾರೆ. ಹಿಂದೆಯೂ ಮಾಡಿದ್ದಾರೆ, ಹಾಗೆ ಮಾಡುವುದಕ್ಕೆ ಅನುಕೂಲತೆ ಇದೆ. ಡಿವಿಷನಲ್ ಕಮೀಷನರ್ ಪೋಸ್ಟಿಗೆ ಐ.ಪಿ.ಎಸ್. ಆಫೀಸರ್‌ಗಳನ್ನು ಹಾಕುವುದಕ್ಕೆ ಬರುವುದಿಲ್ಲ. ಈಗ ನಾವು ಹಾಕಿರತಕ್ಕಂಥ ಪೋಸ್ಟ್ ಅನ್ನು ಅಪ್‌ಗ್ರೇಡ್ ಮಾಡಿ ಅಲ್ಲಿ ಐ.ಪಿ.ಎಸ್. ಆಫೀಸರ್ ಅನ್ನು ಹಾಕಿದ್ದೇವೆ. ಹಿಂದೆಯೂ ಹಾಕಿದ್ದಾರೆ. ಅದಕ್ಕೆ ಹಿಂದೆ ನೀವು ಕಾನೂನನ್ನು ರೆಫರ್ ಮಾಡಿದ್ದೀರಾ ಎಂದು ಕೇಳಿದರು. ನಾನು ನೋಡಿದೆ, ಕಾನೂನು ಇಲಾಖೆಯಲ್ಲಿ ಹಿಂದೆ ಅವರು ತಮ್ಮ ಒಪ್ಪಿಗೆಯನ್ನು ಕೊಟ್ಟಿಲ್ಲ. ಅಪಾಯಿಂಟ್ ಮಾಡುವುದಕ್ಕಿಂತ ಮುಂಚೆ ಅಬ್ಜೆಕ್ಷನ್ ಮಾಡಿದ್ದಾರೆ ಅಷ್ಟೇ. ಆಮೇಲೆ ಅದಕ್ಕೆ ಅವರು ಅಬ್ಜೆಕ್ಷನ್ ಏನೂ ಮಾಡಿಲ್ಲ. ಆದುದರಿಂದ ಇರುವ ವಿಷಯ ಹೇಳಿದ್ದೇನೆ. ನಾನೇನೂ ತಪ್ಪು ಹೇಳಲಿಲ್ಲ.

ಶ್ರೀಮತಿ ಪ್ರಮೀಳ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ಕಾನೂನಿನಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಎಂದು ಫ್ರೇಮ್ ಮಾಡಿದ್ದಾರೆ. The Karnataka General Services Motor Vehicles Branch Recruitment Rules, 1976 ಅದರಲ್ಲಿ ಕಮೀಷನರ್ ಫಾರ್ ಟ್ರಾನ್ಸ್‌ಪೋರ್ಟ್ ಎಂದರೆ by posting an officer of the Indian Administrative Services Senior Scale ಎಂದು ಇದೆ. ಈ ರೂಲ್ಸ್ ಇವತ್ತಿನವರೆಗೂ ಕೂಡ ಅಮೆಂಡ್ ಆಗಿಲ್ಲ. ನಂತರ ಜನರಲ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಬೇಕಾದರೆ, "shall not

apply to the recruitment post to be filled by appointment of members of all-India services" ಎಂದು ಹೇಳಿದ್ದಾರೆ. ರಿಲ್ಯಾಕ್ಸೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ಇದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ರೂಲ್ಸ್‌ನಲ್ಲಿ ಹೇಳಿದ್ದಾರೆ ಮತ್ತೆ ಇಂಡಿಯನ್ ಅಡ್ಮಿನಿ-ಸ್ಟ್ರೇಟೀವ್ ಸರ್ವೀಸಸ್ ಕೇಡರ್ ರೂಲ್ಸ್ ಎಂದು 1954ರಲ್ಲಿ ಫ್ರೇಮ್ ಮಾಡಿದ್ದಾರೆ. ಅದರಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ, ಯಾವುದೇ ಟೆಂಪೊರರಿ ಅಪಾಯಿಂಟ್‌ಮೆಂಟ್ ಕೂಡ, a cadre post in the State shall not be filled by a person who is not a cadre officer except in the following cases ಎಂದು ಹೇಳಿದ್ದಾರೆ. ಆ ರೂಲ್ಸ್‌ನಲ್ಲಿ ಕೂಡ ಇವರು ಕಾನೂನು ಪ್ರಕಾರ ಬರುವುದಿಲ್ಲ. ನಂತರ, Indian Administrative Service fixation of Cadre Strength Regulations 1955 ಅದರಲ್ಲಿ ಕರ್ನಾಟಕಕ್ಕೆ ಎಷ್ಟು ಆಫೀಸರ್‌ಗಳನ್ನು ಅಲಾಟ್ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಅದರಲ್ಲಿ ಟ್ರಾನ್ಸ್‌ಪೋರ್ಟ್ ಕಮೀ-ಷನರ್ ಪೋಸ್ಟ್ ಇರತಕ್ಕಂಥಾದ್ದು ಒಂದೇ ಒಂದು. ಇದನ್ನು ಯಾವುದೇ ಕಾರಣದಿಂದ, ಯಾವುದೇ ಕಾನೂನಿನ ಅಡಿಯಲ್ಲಿ ಐ.ಪಿ.ಎಸ್. ಆಫೀಸರ್ ಅನ್ನು ಪೋಸ್ಟ್ ಮಾಡುವುದಕ್ಕೆ ಕೇಂದ್ರ ಸರ್ಕಾರ-ಕ್ಕಾಗಲೀ ಈ ಕಾನೂನಿನಲ್ಲಿ ಅಧಿಕಾರವಿಲ್ಲ. ದಯವಿಟ್ಟು ನಿಮ್ಮ ಲಾ ಡಿಪಾರ್ಟ್‌ಮೆಂಟಿನವರು ಈ ರೂಲ್ಸ್‌ಗಳನ್ನು ನೋಡಿದ್ದಾರೋ, ಅಥವ ಇಲ್ಲವೋ ಎನ್ನುವುದು ಖಂಡಿತ ಗೊತ್ತಿಲ್ಲ. ಯಾವ ಕಾರಣ-ದಿಂದ ಇವರನ್ನು ಅಪಾಯಿಂಟ್ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ಇದು ಹೈ ಕೋರ್ಟಿಗೆ ಎರಡು ಸಲ ಹೋಗಿ ಜ್ಯುಡಿಷಿಯಲ್ ಎಕ್ಸ್‌ಪೀರಿಯೆನ್ಸ್ ಇಲ್ಲದಿದ್ದರೆ ಮಾಡುವುದಕ್ಕೆ ಬರುವುದಿಲ್ಲ ಎಂದೂ ಕೂಡ ಹೇಳಿದ್ದಾರೆ. ಆದುದರಿಂದ ತಾವು ದಯವಿಟ್ಟು ಪೇಪರ್ಸ್ ತರಿಸಿ ನೋಡಿ. ನಾನು ಎಲ್ಲಾ ರೂಲ್ಸ್‌ಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯವಿಟ್ಟು ಪರಿಶೀಲಿಸಿ ನೋಡಿ, ಇದನ್ನು ಮಾಡುವು-ದಕ್ಕೆ ಬರುವುದಿಲ್ಲ. ಆದ್ದರಿಂದ ತಕ್ಷಣ ಕ್ರಮವನ್ನು ತೆಗೆದುಕೊಂಡು ಈ ಅನಗತ್ಯ ಅಧಿಕಾರಿಯನ್ನು ಹಾಕಿರುವುದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

MR. SPEAKER: They will examine it.

ಶ್ರೀ ಜೆ.ಹೆಚ್. ಪಟೇಲ್:- ಲೀಗಲ್ ಆಗಿ ಮಾಡುತ್ತೇನೆ. ಅದು ಸರಿಯಲ್ಲ ಎಂದ ತಕ್ಷಣ ನಾನು ಅದನ್ನು ಮುಂದುವರಿಸಲು ಸಿದ್ಧನಿಲ್ಲ. ಆದರೆ ಕಾನೂನುಬದ್ಧವಾಗಿ ಅವಕಾಶವಿದ್ದರೆ ಮಾಡು-ತ್ತೇವೆ.

ಶ್ರೀಮತಿ ಪ್ರಮೀಳ ನೇಸರ್ಗಿ:- ನಾನು ಎಲ್ಲಾ ರೂಲ್ಸ್‌ಗಳ ಪೇಪರ್‌ಗಳನ್ನು ತಮಗೆ ಕಳುಹಿಸಿ-ಕೊಡುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್:- ದಯವಿಟ್ಟು ಕಳುಹಿಸಿ ಕೊಡಿ.

MR. SPEAKER:- Please forward it. ಪ್ರಶ್ನೋತ್ತರ ಮುಗಿಯಿತು. ಈಗ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.